**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ., ನ್ಯಾಯಾಲಯ, ನವಲಗುಂದ.**

**ಓ. ಎಸ್. ನಂಃ206/2022**

**ಡಿ.ಡಬ್ಲೂ: 2**

| | | |
|---|---|---|
| **ಹೆಸರು** | **:-** | **ಶಂಕ್ರಪ್ಪ ಪುಂಡಲಿಕಪ್ಪ ದೇಶೆಟ್ಟಿ** |
| **ವಯಾ** | **:-** | **42 ವರ್ಷ** |
| **ಉದ್ಯೋಗ** | **:-** | **ದಸ್ತಾವೇಜು ಬರಹಗಾರರು** |
| **ವಾಸ ಸ್ಥಳ** | **:-** | **ನವಲಗುಂದ.** |
| **ಸತ್ಯ ಪ್ರತಿಜ್ಞೆ ಮೇರೆಗೆ** | **:-** | **ದಿನಾಂಕಃ 24-09-2025** |

**<u>ಮುಖ್ಯ ವಿಚಾರಣೆಃ ವಿ ಟಿ ಕೆ ವಕೀಲರಿಂದಃ</u>**

ನಾನು 2009 ರಿಂದ ದಸ್ತಾವೇಜು ಬರಹಗಾರರು ಎಂದು ಪರವಾನಗೆ ಪಡೆದುಕೊಂಡು ಕೆಲಸ ನಿರ್ವಹಿಸುತ್ತಿದ್ದೇನೆ. ಸಾಕ್ಷಿಯು ನಿಡಿ-2 ಹಾಗೂ ನಿಡಿ-3 ನ್ನು ನಾನೇ ತಯಾರಿಸಿ ಗಣಕೀಕೃತ ಮಾಡಿರುತ್ತೇನೆ. ನಿಡಿ-2 ಕ್ಕೆ 2 ನೇ ಪ್ರತಿವಾದಿ, 5 ನೇ ಪ್ರತಿವಾದಿ ಹಾಗೂ 6 ಜನ ಸಾಕ್ಷಿದಾರರು ಸಹಿ ಮಾಡಿರುತ್ತಾರೆ. ಸದರಿ ದಾಖಲೆಗೆ ನಾನೂ ಸಹ ಸಹಿ ಮಾಡಿರುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ ಸಹಿಯನ್ನು **ನಿಡಿ-2(ಎ)** ಯಿಂದ **ನಿಡಿ-2(ಸಿ)** ಎಂದು ಗುರುತಿಸಲಾಯಿತು.

2. ನಿಡಿ-3 ಕ್ಕೆ 2 ಮತ್ತು 4 ನೇ ಪ್ರತಿವಾದಿಯರು ಹಾಗೂ 6 ಜನ ಸಾಕ್ಷಿದಾರರು ಸಹಿ ಮಾಡಿರುತ್ತಾರೆ. ಸದರಿ ದಾಖಲೆಗೆ ನಾನೂ ಸಹ ಸಹಿ ಮಾಡಿರುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ ಸಹಿಯನ್ನು **ನಿಡಿ-3(ಎ)** ಯಿಂದ **ನಿಡಿ-3(ಸಿ)** ಎಂದು ಗುರುತಿಸಲಾಯಿತು. ನಿಡಿ-2 ಮತ್ತು 3 ರಲ್ಲಿರುವ ಅಂಶಗಳು ಸರಿ ಇರುತ್ತವೆ.

**<u>ಪಾಟೀ ಸವಾಲುಃ ಶ್ರೀ ಎಚ್ ಎಸ್ ಕೆ ವಕೀಲರಿಂದಃ</u>**

ನಿಡಿ-2 ಮತ್ತು 3 ನ್ನು ತಯಾರಿಸಲು ಸದರಿ ಜಮೀನುಗಳ ಖರೀದಿದಾರರು ಮತ್ತು ಮಾರಾಟಗಾರರು ಮಾಹಿತಿ ನೀಡಿರುತ್ತಾರೆ. ಸದರಿಯವರೆಲ್ಲಾ ದಿನಾಂಕಃ 20-12-2019 ರಂದು ನನ್ನ ಬಳಿ ಬಂದಿರುತ್ತಾರೆ. ಸದರಿಯವರು ದಾಖಲೆಗಳನ್ನು ತಯಾರಿಸಲು ನನಗೆ

ಜಮೀನುಗಳ ಚಾಲ್ತಿ ಪಹಣಿ ಪತ್ರಿಕೆ, ಎರಡೂ ಪಕ್ಷಕಾರರ ಆಧಾರ ಕಾರ್ಡಗಳು, ಪ್ಯಾನ್ ಕಾರ್ಡ ಗಳು, ದೂರವಾಣಿ ಸಂಖ್ಯೆ ಹಾಗೂ ಚೆಕ್ಕುಬಂದಿ ವಿವರಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ಜಮೀನುಗಳ ಹಣದ ವ್ಯವಹಾರ ನನ್ನ ಸಮಕ್ಷಮ ಆಗಿರುವುದಿಲ್ಲ. ಸದರಿಯವರು ಮಾಹಿತಿ ನೀಡಿದ ಪ್ರಕಾರ ಹಣವನ್ನು ನಮೂದಿಸಿರುತ್ತೇವೆ ಎಂದರೆ ಸರಿ. ಗುಮ್ಮಗೋಳ ಗ್ರಾಮದಲ್ಲಿ 2019 ರಲ್ಲಿ ಪ್ರತಿ ಎಕರೆಗೆ ಎಷ್ಟು ಮೌಲ್ಯ ಇತ್ತು ಎಂದು ನನಗೆ ಗೊತ್ತಿಲ್ಲ. ಗುಮ್ಮಗೋಳ ಗ್ರಾಮದಲ್ಲಿ ಈಗ ಇರುವ ಜಮೀನಿನ ಮೌಲ್ಯದ ಕುರಿತು ನನಗೆ ಮಾಹಿತಿ ಇಲ್ಲ. ಪಕ್ಷಕಾರರು ನಮಗೆ ಜಮೀನಿನ ಹಳೆಯ ಉತಾರ ಹಾಗೂ ಹಕ್ಕು ಬದಲಾವಣೆಗಳನ್ನು ತೋರಿಸಿರುವುದಿಲ್ಲ. 2 ನೇ ಪ್ರತಿವಾದಿಗೆ ಆಸ್ತಿ ಯಾವ ರೀತಿ ಬಂದಿರುತ್ತದೆ ಎಂದು ನನಗೆ ಮಾಹಿತಿ ಇಲ್ಲ. ನಾನು ಸದರಿ ಆಸ್ತಿಯನ್ನು ಪಿತ್ರಾರ್ಜಿತ ಹಾಗೂ ಸ್ವಯಾರ್ಜಿತ ಎಂದು ವಿಚಾರಣೆ ಮಾಡಿದಾಗ ಜಮೀನುಗಳ ಮಾಲೀಕರು ಅವು ತಮ್ಮ ಸ್ವಂತ ಆಸ್ತಿ ಎಂದು ತಿಳಿಸಿರುತ್ತಾರೆ. ಸಾಮಾನ್ಯವಾಗಿ ಮಾರಾಟ ಮಾಡುವವರ ಹೆಂಡತಿ ಮತ್ತು ಮಕ್ಕಳ ಸಹಿಯನ್ನು ಸಮ್ಮತಿಯ ರೂಪದಲ್ಲಿ ಪಡೆಯಲಾಗುತ್ತದೆ ಎಂದರೆ ಸಾಕ್ಷಿಯು ಮಾಹಿತಿ ನೀಡಿದರೆ ತೆಗೆದುಕೊಳ್ಳುತ್ತೇವೆ ಎಂದು ನುಡಿದಿರುತ್ತಾರೆ. ನಿಡಿ-2 ಮತ್ತು 3 ರಲ್ಲಿ ಮಾರಾಟ ಮಾಡುವವರ ಮನೆತನಕ್ಕೆ ಸಂಬಂಧಪಟ್ಟವರ ಸಹಿಗಳು ಇಲ್ಲ ಎಂದರೆ ಸರಿ. ನಿಡಿ-2 ಮತ್ತು 3 ರಲ್ಲಿ ಸಹಿ ಮಾಡಿದ ಸಾಕ್ಷಿದಾರರು ಒಂದೇಯಾಗಿರುತ್ತಾರೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**